3. ಕಾಲುವೆಗಳ ನಿರ್ಮಾಣ ಹಂತದಲ್ಲಿ ಸ್ಥಳೀಯ ಅವಶ್ಯಕತೆಗನುಗುಣವಾಗಿ ಕೆಲವು ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಲು ಹೆಚ್ಚಿನ ಕಾಲಾವಕಾಶ ಬೇಕಾಗಿರುವುದು. ಮುಂತಾದವುಗಳು.

ಊ) ನಿಜ.

ಋ) ಕಾಮಗಾರಿಗಳ ನಿರ್ವಹಣೆ ಹಂತದಲ್ಲಿ ಈ ಕೆಳಕಂಡ ಕಾರಣಗಳಿಂದಾಗಿ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಹಣವನ್ನು ನೀಡಲಾಗಿರುತ್ತದೆ.

1. ಕೆಲವು ಹೆಚ್ಚುವರಿ ಸಿ, ಡಿ (ಅಡ್ಡಮೋಡಿಗಳು)ನ ಕಾಮಗಾರಿಗಳ ನಿರ್ಮಾಣದ ಅವಶ್ಯಕತೆ ಇರುವುದರಿಂದ.

2. ನಿರ್ಮಾಣದ ಹಂತದಲ್ಲಿ ಪದರುಗಳ ವರ್ಗೀಕರಣದಲ್ಲಿನ ವ್ಯತ್ಯಾಸದಿಂದಾಗಿ, ತಾಂತ್ರಿಕ ಹಾಗೂ ಸ್ಥಳೀಯ ಅವಶ್ಯಕತೆಗನುಗುಣವಾಗಿ ಕಾಮಗಾರಿಗಳ ವಿನ್ಯಾಸಗಳಲ್ಲಿ ಮಾಡಬೇಕಾಗಿರುವ ಮಾರ್ಪಾಡಿನಿಂದಾಗಿ.

3. ಅಗೆದ ಮಣ್ಣಿನ ಗುಣಮಟ್ಟ ಅಸಮರ್ಪಕ ಎನಿಸದಲ್ಲಿ ಕ್ವಾರಿಯಿಂದ ಮುರಮ್ ಅನ್ನು ತಂದು ಏರಿ ನಿರ್ಮಾಣ ಮಾಡಬೇಕಾಗಿರುವುದರಿಂದ, ಮುಂತಾದ ಇತರೆ ತಾಂತ್ರಿಕ ಕಾರಣಗಳಿಂದಾಗಿ.

ಋ) ಎ) ಐ) ಮತ್ತು ಐ) ಕೆಲವು ಸಂದರ್ಭಗಳಲ್ಲಿ ಕಾಲುವೆಗಳ ನಿರ್ಮಾಣದ ಕುರಿತು ರೈತರಿಂದ, ಜನಪ್ರತಿನಿಧಿಗಳಿಂದ ಹಾಗೂ ಪತ್ರಿಕೆಗಳ ಮುಖಾಂತರ ದೂರುಗಳು ಬಂದಿರುತ್ತವೆ. ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 72 ರಿಂದ 95 ಹಾಗೂ ವಿತರಣಾ ಕಾಲುವೆ 9 ರಿಂದ 18 ರಡಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆ ಮಾಡಲು ಸರ್ಕಾರವು ಶ್ರಿ .ಎಸ್.ಎಸ್. ಮಗದಾಲ್, ಶ್ರೀ ಎಂ.ಎಸ್. ವಡಕಣ್ಣವರ್ ಮತ್ತು ಶ್ರೀ ಶ್ರೀರಾಮಯ್ಯ ತ್ರಿಸದಸ್ಯರ ಸಮಿತಿಯೊಂದನ್ನು ರಚಿಸಿದ್ದು, ಸದರಿ ಸಮಿತಿಯು ತನಿಖೆಯ ನಂತರ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಸಮಿತಿಯು ತನ್ನ ವರದಿಯಲ್ಲಿ ಕೆಲವು ಕಾಮಗಾರಿ ನಿರ್ವಹಣೆಯಲ್ಲಿ ಕಂಡು ಬಂದಂತಹ ಸಣ್ಣ ಲೋಪದೋಷಗಳನ್ನು ಹಾಗೂ ನ್ಯೂನತೆ/ದುರಸ್ತಿ ಕೆಲಸಗಳನ್ನು ಕಾಮಗಾರಿಗಳ ಅಂತಿಮಗೊಳಿಸುವಿಕೆ ಮುನ್ನವೇ ಸರಿಪಡಿಸಿಕೊಳ್ಳುವಂತೆ ಅಭಿಪ್ರಾಯ ಪಟ್ಟಿರುತ್ತದೆ. ಒಟ್ಟಾರೆ ಸಮಿತಿಯು ಕಾಮಗಾರಿಯ ನಿರ್ವಹಣೆಯಲ್ಲಿ ಹಣ ದುರುಪಯೋಗವಾಗಿರುವುದಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತದೆ. ಈ ನಿಟ್ಟಿನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

204 (622) : ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಮಾಹಿತಿ ತಂತ್ರಜ್ಞಾನದ ಇಲಾಖೆಯಿಂದ ಯಾವ ಯಾವ ಯೋಜನೆಯಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ;

ಆ) ಅದರಲ್ಲಿ ಖರ್ಚಾದ ಮತ್ತು ಉಳಿದ ಹಣ ಎಷ್ಟು (ಯೋಜನೆವಾರು ವಿವರಗಳನ್ನು ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯಿಂದ ವಿವಿಧ ಯೋಜನೆಗಳಿಗಾಗಿ ಮಂಜೂರಾದ ಮತ್ತು ವೆಚ್ಚ ಮಾಡಲಾದ ಹಣದ ವಿವರ.

ಕ್ರ. ಸಂ.	ಯೋಜನೆಯ ಹೆಸರು	ಮಂಜೂರಾದ ಹಣ	ವೆಚ್ಚ ಮಾಡಲಾದ ಹಣ	ಉಳಿಕೆ ಹಣ
			[ರೂ. ಲಕ್ಷಗಳಲ್ಲಿ]	
1.	ಅಂಗವಿಕಲರ ಕಂಪ್ಯೂಟರ್ ಶಿಕ್ಷಣಕ್ಕಾಗಿ	24.20	24.20	–
2.	ಹುಬ್ಬಳ್ಳಿಯಲ್ಲಿ ಐಟಿ ಪಾರ್ಕ್ ಸ್ಥಾಪನೆಗಾಗಿ	2841.8	2841.8	–
3.	ಬೆಂಗಳೂರಿನಲ್ಲಿ ಎಸ್‌ಟಿಪಿಐ ಮತಿಯಿಂದ ಮೂಷಣಾ ಕೇಂದ್ರ ಸ್ಥಾಪನೆ ಮಾಡಿಸಲು	636.41	636.41	–
4.	ಕರ್ನಾಟಕ ದೂರಸಂವೇದಿ ಅನ್ವಯಿಕ ಕೇಂದ್ರದ ಮೂಲಕ ರಾಜ್ಯದ ನೈಸರ್ಗಿಕ ಸಂಪನ್ಮೂಲಗಳ ಮಾಹಿತಿ ವ್ಯವಸ್ಥೆ ಮತ್ತು ಸಂಪರ್ಕ ಅಭಿವೃದ್ಧಿ ಯೋಜನೆಗಾಗಿ	300.00	300.00	–
5.	ಜಿಲ್ಲಾ ಮಟ್ಟಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸುವ ಯೋಜನೆಗಾಗಿ	7.93	7.93	–
6.	59 ಯುವ.ಕಾಂ ಕೇಂದ್ರಗಳಿಗೆ ಮೂಲಭೂತ ಸೌಲಭ್ಯವನ್ನು ಒದಗಿಸುವುದಕ್ಕಾಗಿ	368.75	368.75	–
7.	ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರದ ಮೂಲಕ ಐಟಿ ಕಾರಿಡಾರ್‌ನ ಯೋಜನೆ ಮತ್ತು ಅಭಿವೃದ್ಧಿ ಮತ್ತು ಸಾಮಾನ್ಯ ಮಾಹಿತಿ ವ್ಯವಸ್ಥೆಗಾಗಿ	110.00	110.00	–
8.	ಮಂಡ್ಯ ಜಿಲ್ಲೆಯ 79 ಗ್ರಾಮ ಪಂಚಾಯಿತಿಗಳಲ್ಲಿ ಐ-ಸ್ಟೇಷನ್ಸ್ ಸ್ಥಾಪಿಸುವುದಕ್ಕಾಗಿ	4.91	4.91	–

1	2	3	4	5
9.	ಐಟಿ ಕಾರಿಡಾರ್ ಯೋಜನಾ ವರದಿ ತಯಾರಿಸುವುದಕ್ಕಾಗಿ	84.94	84.94	–
10.	ಕನ್ನಡ ಗಣಕೀಕರಣ ಜನಪ್ರಿಯಗೊಳಿಸುವ ಯೋಜನೆಗಾಗಿ	7.13	7.13	–
11.	ಸಚಿವಾಲಯ ಲ್ಯಾನ್ ಯೋಜನೆಗಾಗಿ	503.00	503.00	–
12.	ಯುಪಕಾಂ ಯೋಜನೆಯಡಿಯಲ್ಲಿ ಸಹಾಯಧನ ಬಿಡುಗಡೆಗಾಗಿ	321.00	321.00	–
13.	ಬೆಂಗಳೂರು ವಿಮಾನ ನಿಲ್ದಾಣದ ಇಮಿಗ್ರೇಷನ್ ಸೆಲ್‌ನ ಗಣಕೀಕರಣ ಯೋಜನೆಗಾಗಿ	3.63	3.63	–
14.	ಆಂಟಿ ಪೈರಸಿ ಯೋಜನೆಗಾಗಿ	12.50	12.50	–
15.	ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ಮೂಲಭೂತ ಸೌಲಭ್ಯವನ್ನು ಒದಗಿಸುವ ಯೋಜನೆಗಾಗಿ	600.00	600.00	–
16.	ಜಿಲ್ಲಾ ಮಟ್ಟದಲ್ಲಿ ಪೋಷಣಾ ಕೇಂದ್ರಗಳನ್ನು ಸ್ಥಾಪಿಸುವ ಸಲುವಾಗಿ	200.00	200.00	–
17.	ಮುಖ್ಯವಾಹಿನಿ ಯೋಜನೆ ಕಾರ್ಯಕ್ರಮಕ್ಕಾಗಿ	137.78	137.78	–
18.	ಎಸ್‌ಟಿಪಿಐ ಮತಿಯಿಂದ ಮಂಗಳೂರಿನಲ್ಲಿ ಭೂಕೇಂದ್ರ ಮತ್ತು ಪೋಷಣಾ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ	115.00	115.00	–
19.	ಮಾಹಿತಿ ತಂತ್ರಜ್ಞಾನ ಉನ್ನತೀಕರಣ ಹಾಗೂ ಅಭಿವೃದ್ಧಿ	2095.00	2047.00	48.00
20.	ಐಐಐಟಿ ಸಂಸ್ಥೆಯ ಮೂಲಭೂತ ಸೌಲಭ್ಯ ಅಭಿವೃದ್ಧಿಗಾಗಿ	1485.00	1485.00	–
21.	ಬೈಟ್ಸ್ ಸಂಸ್ಥೆಗೆ ಕಾರ್ಪಸ್ ಅನುದಾನ	300.00	300.00	–
22.	ಕೆಬಿಟ್ಸ್ ಸಂಸ್ಥೆಗೆ ಕಾರ್ಪಸ್ ಅನುದಾನ	200.00	200.00	–
	ಒಟ್ಟು	10358.98	10310.98	48.00